**Government of Karnataka**
**Deposition Shet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಅಸಲು ದಾವೆ ಸಂಖ್ಯೆ | 60/2014 C/w OS 61/2014 |

ದಿನಾಂಕ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

CW-2

| | |
|---|---|
| ಹೆಸರು | ಡಾ: ಜಿಯೋಪಾಲ್ |
| ತಂದೆಯ ಹೆಸರು | ಎ ಕೆ ಪಾಲ್ |
| ವಯಸ್ಸು | 45 ವರ್ಷ |
| ಉದ್ಯೋಗ | ಸಹಾಯಕ ಪ್ರಾಧ್ಯಾಪಕರು ಮನೋರೋಗ ತಜ್ಞರು ನಿಪ್ಪಿಡಿ ಸಿಕಂದರಾಬಾದ್ |
| ವಾಸಸ್ಥಳ | ಸಿಕಂದರಾಬಾದ್ |

**ಮುಖ್ಯ ವಿಚಾರಣೆಃ ಸಾಕ್ಷಿದಾರರಿಂದ :-**

ಸುಮಾರು 12 ವರ್ಷದಿಂದ ಸಹಾಯಕ ಪ್ರಾಧ್ಯಾಪಕರು ಮನೋರೋಗ ತಜ್ಞರು ಮನೋರೋಗ ತಜ್ಞ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ 6 ತಿಂಗಳಿನಿಂದ ನಿಪ್ಪಿಡಿ ಸಿಕಂದರಾಬಾದ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ಘನ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ 29-07-2025 ರಂದು 3ನೇ ವಾದಿಯಾದ ಶಾಲಂನಾಯಕ ತಂದೆ ಹುಸೇನ ನಾಯಕ ವಯಸ್ಸು 42 ವರ್ಷ ಇವರು ರಾಯಚೂರು ರೀಮ್ಸ್ ಆಸ್ಪತ್ರೆಗೆ ತಪಾಸಣೆಗೆ ಬಂದಿದ್ದರು. ಸದರಿ 3ನೇ ವಾದಿಯನ್ನು 02 ಟೆಸ್ಟ್‌ಗಳ ಮೂಲಕ ಪರೀಕ್ಷಿಸಿದ್ದೇನೆ. 1. Developmental screening test, 2. vineland social maturity scales ಐ ಕ್ಯೂ ಟೆಸ್ಟ್ ನ್ನು ಮಾಡಲಾಗಿ ಅವರಿಗೆ ಪ್ರಶ್ನಾವಳಿಗಳನ್ನು ಮತ್ತು ಕ್ಲಿನಿಕಲ್ ಸೈಕಲಾಜಿ ಟೆಸ್ಟ್‌ಗಳನ್ನು ನನ್ನ ಮತ್ತು H.O.D. ರೀಮ್ಸ್ ಆಸ್ಪತ್ರೆ ರಾಯಚೂರು ಓ ಪಿ ಡಿ ನಂಬರ್ 20250112878 dtd 05-06-2025 ನಮ್ಮ ನಿಗರಾಣಿಯಲ್ಲಿ ಮಾಡಲಾಯಿತು. ಸದರಿ ಪರೀಕ್ಷೆಯಲ್ಲಿ ಕಂಡು ಬಂದ ಅಂಶ ಏನೆಂದರೆ,

1. 3 ನೇ ವಾದಿಯ ಭೌತಿಕ ವಯಸ್ಸು 11 ವರ್ಷ 8 ತಿಂಗಳು ಮಗುವಿಗಿರುವಷ್ಟು ಇತ್ತು .
2. 3ನೇ ವಾದಿಗೆ ಬೇರೆ ಮಾನಸಿಕ ತೊಂದರೆಗಳು ಇದ್ದವು.

3. 3ನೇ ವಾದಿಗೆ ಮಾನಸಿಕ ತೊಂದರೆ ಮತ್ತು ಭೌತಿಕ ವಯಸ್ಸು ಸುಮಾರು 11 ವರ್ಷ 8 ತಿಂಗಳು ಮಗುವಿನಷ್ಟು ಇರುವುದರಿಂದ ಅವರಿಗೆ ಪ್ರತಿಶತ ಶೇಕಡಾ 25% ರಷ್ಟು ನ್ಯೂನ್ನತೆ ಇರುವುದು ಕಂಡು ಬಂದಿರುತ್ತದೆ.

4. ಸದರಿ ವ್ಯಕ್ತಿಯ ಐ ಕ್ಯೂ 77 ಆಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ 3ನೇ ವಾದಿಯು Border liens intelligence ಗೆ ಸೇರಿರುತ್ತಾರೆ.

ನ್ಯಾಯಾಲಯದ ದಾವೆ ನಡೆಸಲು ಅವಶ್ಯಕ ತಿಳುವಳಿಕೆ ಇರುವುದಿಲ್ಲ. ಅವರಿಗೆ ದಾವೆ ನಡೆಸಲು ಸಹಾಯಕರ ಅವಶ್ಯಕತೆ ಇರುತ್ತದೆ. ಈ ಬಗ್ಗೆ NIEPID ಸಂಸ್ಥೆಯಿಂದ ನೀಡಿರುವ ಸೈಕಾಲಾಜಿಕಲ್ ವರದಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ನಿ ಸಿ -2 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಸಿ 2(ಎ) ಎಂದು ಗುರುತಿಸಲಾಯಿತು. ಶಾಲಂನಾಯಕ ರವರಿಗೆ ಸೇರಿದ ಓ ಪಿ ವರದಿ ಮತ್ತು ಅದರೊಂದಿಗೆ ಸಲ್ಲಿಸಿದ ಆಧಾರ ಕಾರ್ಡ್ ನ್ನು ನಿ ಸಿ 3 ಎಂದು, ದಿನಾಂಕ: 07-04-2025 ರಂದು ರೀಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳು ಸಲ್ಲಿಸಿರುವ ಮನವಿ ನಿ ಸಿ 4 ಎಂದು, ಕೇಸ್ ರಿಪೋರ್ಟ್ ನ್ನು ನಿ ಸಿ 5 ಎಂದು ಗುರುತಿಸಲಾಯಿತು. ದಿನಾಂಕ: 01-07-2025 ರಾಯಚೂರು ರೀಮ್ಸ್ ಆಸ್ಪತ್ರೆಯವರು ಸಲ್ಲಿಸಿರುವ ಪತ್ರವನ್ನು ನಿ ಸಿ 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಮುಂದೂಡಲಾಯಿತು.**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ